2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 164/2022

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಫರ್ಜಾನಾ ಬಾನು | ಪಿಡಬ್ಲೂ -1 |
| ಗಂಡನ ಹೆಸರು | - | ಮುಸ್ತಾಕ್ | ಸಿಡಬ್ಲೂ -1 |
| ವಯಸ್ಸು | - | 26 ವರ್ಷ | |
| ಉದ್ಯೋಗ | - | ಮನೆ ಕೆಲಸ | |
| ವಾಸ ಸ್ಥಳ | - | ಕಡೂರು | |

ದಿನಾಂಕಃ 12.04.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ 1 ನೇ ಆರೋಪಿ ನನ್ನ ಗಂಡ, 2 ನೇ ಆರೋಪಿ ನನ್ನ ಅತ್ತೆ ಮತ್ತು ಈ ದಿನ ಗೈರು ಹಾಜರಿರುವ 3 ನೇ ಆರೋಪಿ ನನ್ನ ನಾದಿನಿ.

2. ಚಾಸಾ.2, ಚಾಸಾ.3 ನನ್ನ ಸಂಬಂಧಿಕರು. ಚಾಸಾ.4 ನನ್ನ ಸೋದರ ಮಾವ. ಚಾಸಾ.5, 6 ರವರು ಗೊತ್ತು, ಅವರು ನಮ್ಮ ಊರಿನವರು. ಚಾಸಾ.7 ನನ್ನ ಸೋದರತ್ತೆ. ಚಾಸಾ.8 ಕಡೂರಿನಲ್ಲಿರುವ ಮಸೀದಿಯ ಸದಸ್ಯರು. ಚಾಸಾ.9 ನನ್ನ ಗಂಡನ ಬಾಡಿಗೆ ಮನೆಯ ಮಾಲೀಕರು.

3. ದಿನಾಂಕ 21.11.2010 ರಂದು ಕಡೂರಿನಲ್ಲಿರುವ ಜರೀನಾಬಿ ದರ್ಗಾದಲ್ಲಿ ನನ್ನ ಮತ್ತು 1 ನೇ ಆರೋಪಿಯ ಮದುವೆ ನಡೆದಿತ್ತು. ನಮ್ಮ ಮದುವೆಯನ್ನು ಹಿರಿಯರು ನಿಶ್ಚಯಿಸಿ ಸಂಪ್ರದಾಯದಂತೆ ಮಾಡಿದ್ದರು. ನನಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗನಿರುತ್ತಾನೆ. ನನ್ನ ಮದುವೆಯಾದ ಬಳಿಕ

ಕಡೂರಿನಲ್ಲಿದ್ದ ಬಾಡಿಗೆ ಮನೆಯಲ್ಲಿ ನಾನು ನನ್ನ ಗಂಡ ಮತ್ತು ಅತ್ತೆ ಮಾವ ವಾಸವಾಗಿದ್ದೆವು. ನನ್ನ ಮದುವೆಯಾಗುವಷ್ಟರಲ್ಲಿ ನನ್ನ ನಾದಿನಿಯಾದ 3 ನೇ ಆರೋಪಿಗೆ ಮದುವೆಯಾಗಿತ್ತು. ನನ್ನ ಮದುವೆಯ ನಂತರದಲ್ಲಿ ಆಕೆ ಆಗಾಗ್ಗೆ ನನ್ನ ಗಂಡನ ಮನೆಗೆ ಬಂದು ಹೋಗಿ ಮಾಡುತ್ತಿದ್ದಳು. 3 ನೇ ಆರೋಪಿಯ ಗಂಡನ ಮನೆ ನನ್ನ ಗಂಡನ ಮನೆಯ ಪಕ್ಕದ ಬೀದಿಯಲ್ಲಿ ಇತ್ತು.

4. ಮದುವೆಯಾದ ಹೊಸದರಲ್ಲಿ ನನ್ನ ಗಂಡ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದನು. ನಂತರದ ದಿನಗಳಲ್ಲಿ ಆರೋಪಿತರು ಮತ್ತು ನನ್ನ ಮಾವ ಅಡುಗೆಯ ವಿಚಾರದಲ್ಲಿ ಮತ್ತು ಸಣ್ಣ ಪುಟ್ಟ ವಿಚಾರದಲ್ಲಿ ನನಗೆ ಕೆಟ್ಟ ಮಾತುಗಳಿಂದ ಬೈದು ಕಿರಿಕಿರಿ ಮಾಡುತ್ತಿದ್ದರು. ನನ್ನ ಗಂಡ ನನಗೆ ಕೈಗಳಿಂದ ಹೊಡೆದು ಹಿಂಸೆ ಮಾಡುತ್ತಿದ್ದನು. ಆರೋಪಿ ಕೊಡುತ್ತಿದ್ದ ಹಿಂಸೆಯನ್ನು ತಾಳಲಾರದೇ ನಾನು ನನ್ನ ಸೋದರತ್ತೆಯಾದ ಚಾಸಾ.7 ಶಾಕೀರಾ ಶೇಕ್ ರವರಿಗೆ ಆ ವಿಚಾರವನ್ನು ತಿಳಿಸಿದೆನು. ಅವರು ನನ್ನ ಗಂಡನನ್ನು ಕರೆದು ಬೈದರು. ಆಗ ನನ್ನ ಗಂಡ ನನ್ನನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿದನು. ಆದರೆ ಪುನಃ ನನ್ನ ಗಂಡ ನನಗೆ ಹಿಂಸೆ ಕೊಡುತ್ತಿದ್ದನು. ನನ್ನ ನಾದಿನಿಯಾದ 3 ನೇ ಆರೋಪಿ ನನಗೆ ಹೊಡೆಯುತ್ತಿದ್ದಳು. ಆರೋಪಿತರು ನನಗೆ ಕೊಡುತ್ತಿದ್ದ ಹಿಂಸೆಯನ್ನು ತಾಳಲಾರದೇ ದಿನಾಂಕ 22.04.2019 ರಂದು ಕಡೂರು ಪೊಲೀಸ್ ಠಾಣೆಗೆ ಹೋಗಿ ಆರೋಪಿತರು ನನಗೆ ತುಂಬಾ ಹಿಂಸೆ ಕೊಡುತ್ತಿದ್ದಾರೆ ಅವರನ್ನು ಕರೆಸಿ ಬುದ್ದಿ ಹೇಳಿ ಎಂದು ಅರ್ಜಿ ಕೊಟ್ಟೆನು. ಆ ರೀತಿ ಅರ್ಜಿಯನ್ನು ಕೊಟ್ಟು ಪುನಃ ನಾನು ನನ್ನ ಗಂಡನ ಮನೆಗೆ ಹೋದೆನು. ನಂತರ ಕಡೂರು ಪೊಲೀಸರು ಆರೋಪಿತರನ್ನು

ತಮ್ಮ ಠಾಣೆಗೆ ಕರೆಯಿಸಿದ್ದರು. ಅಲ್ಲಿ ಆರೋಪಿತರು ನನಗೆ ಹಿಂಸೆ ಕೊಡುವುದಿಲ್ಲ ಚೆನ್ನಾಗಿ ನೋಡಿಕೊಳ್ಳುತ್ತೇವೆ ಎಂದು ಹೇಳಿದ್ದರು. ನಂತರ ನಾವು ವಾಪಾಸ್ಸು ಮನೆಗೆ ಬಂದೆವು.

5. ದಿನಾಂಕ 24.04.2019 ರಂದು ರಾತ್ರಿ ನಾನು ನನ್ನ ಗಂಡನ ಮನೆಯಲ್ಲಿ ಇದ್ದೆನು. ಆಗ ರಾತ್ರಿ 8.30 ಗಂಟೆ ಸಮಯಕ್ಕೆ ನನ್ನ ಗಂಡ ನನ್ನನ್ನು ಕುರಿತು ನೀನು ಬೇಡ ನಾನು ಬೇರೆ ಮದುವೆಯಾಗುತ್ತೇನೆ ಎಂದು ಹೇಳಿ ತನ್ನ ಕೈಗಳಿಂದ ನನ್ನ ಕೆನ್ನೆಗೆ ಹೊಡೆದನು. 3 ನೇ ಆರೋಪಿ ತನ್ನ ಕೈಗಳಿಂದ ನನ್ನ ಕೆನ್ನೆಗೆ ಹೊಡೆದಳು ಮತ್ತು ನನ್ನ ಎದೆಗೆ ಪರಚಿದಳು. ಪೊಲೀಸ್ ಠಾಣೆಗೆ ಹೋಗಿ ನಮ್ಮ ಮೇಲೆ ದೂರು ಕೊಟ್ಟಿದ್ದೀಯಾ ಎಂದು ಹೇಳಿ ನನ್ನ ಗಂಡ ಮತ್ತು ನಾದಿನಿ ನನಗೆ ಆ ರೀತಿ ಹಿಂಸೆ ಕೊಟ್ಟರು. ಅಲ್ಲಿಯೇ ಇದ್ದ ನನ್ನ ಅತ್ತೆ ಇವಳನ್ನು ಇಷ್ಟಕ್ಕೆ ಬಿಡಬಾರದು ಸಾಯಿಸಬೇಕು ಎಂದು ಹೇಳಿ ಮನೆಯಲ್ಲಿ ಪ್ಲಾಸ್ಟಿಕ್ ಬಾಟಲಿಯಲ್ಲಿದ್ದ ಸೀಮೆ ಎಣ್ಣೆಯನ್ನು ತಂದರು. ನಂತರ ಮೂರು ಜನ ಆರೋಪಿತರು ಸೇರಿ ಸೀಮೆ ಎಣ್ಣೆಯನ್ನು ನನ್ನ ತಲೆಯ ಮೇಲಿನಿಂದ ಸುರಿದರು. ನಂತರ ನನ್ನ ಬೆಂಕಿ ಪೊಟ್ಟಣವನ್ನು ತರಲು ಹೋದರು. ನಂತರ ನಾನು ಎದರಿಕೊಂಡು ಬಾಗಿಲ ಚಿಲಕವನ್ನು ತೆಗೆದು ಮನೆಯ ಹೊರಗೆ ಬಂದೆನು. ಅಕ್ಕ ಪಕ್ಕದ ಮನೆಯ ಜನರು ನನ್ನನ್ನು ನೋಡಿ ನನ್ನನ್ನು ಯಾವುದೋ ಆಟೋದಲ್ಲಿ ಕಡೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ನಾನು ಸದರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡೆನು.

6. ಆ ಸಮಯದಲ್ಲಿ ಕಡೂರು ಪೊಲೀಸರು ಅಲ್ಲಿಗೆ ಬಂದು ನನ್ನನ್ನು

ವಿಚಾರಿಸಿದರು ಆಗ ನಾನು ಅವರಿಗೆ ನಡೆದ ವಿಚಾರವನ್ನು ತಿಳಿಸಿದೆನು. ಅದನ್ನು ಅವರು ಬರೆದುಕೊಂಡು ಹೋದರು. ಆಗ ನಾನು ಈಗ ನನಗೆ ಸುಸ್ತಾಗುತ್ತಿದೆ ಬೆಳಿಗ್ಗೆ ಹೇಳುತ್ತೇನೆ ಎಂದು ಹೇಳಿದ್ದೆನು. ನಂತರ ಬೆಳಿಗ್ಗೆ ಅಂದರೆ ದಿನಾಂಕ 25.04.2019 ರಂದು ಪೊಲೀಸರು ಪುನಃ ಆಸ್ಪತ್ರೆಗೆ ಬಂದರು. ಆಗ ನಾನು ಕೊಟ್ಟ ಕಂಪ್ಲೆಂಟನ್ನು ಅವರು ಬರೆದುಕೊಂಡು ಅದನ್ನು ನನಗೆ ಓದಿ ಹೇಳಿ ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡರು.

7. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

8. ದಿನಾಂಕ 22.04.2019 ರಂದು ನಾನು ಕಡೂರು ಪೊಲೀಸರಿಗೆ ಕೊಟ್ಟ ಅರ್ಜಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಅರ್ಜಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಅರ್ಜಿಯನ್ನು ನಿಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

9. ಸಾಕ್ಷಿಯು ಪೊಲೀಸರು ಸದರಿ ಅರ್ಜಿಯ ಮೇರೆಗೆ ನೀಡಿದ್ದಾರೆ ಎಂದು ಹೇಳಲಾದ ಸ್ವೀಕೃತಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

10. ಮೇಲೆ ಹೇಳಿದ ಘಟನೆ ನಮ್ಮ ಮನೆಯ ಹಾಲಿನಲ್ಲಿ ನಡೆದಿತ್ತು. ಸದರಿ ಜಾಗವನ್ನು ನೋಡಿದರೆ ಗುರುತಿಸುತ್ತೇನೆ.

11. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ನಮ್ಮ ಮನೆಯ ಹಾಲಿನಲ್ಲಿ ಘಟನೆ ನಡೆದ ಸ್ಥಳ ಕಂಡು ಬರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.4 ಮತ್ತು ನಿಪಿ.5 ಎಂದು ಗುರುತಿಸಲಾಯಿತು.

12. ನನ್ನ ಅತ್ತೆಯಾದ 2 ನೇ ಆರೋಪಿ ಸೀಮೆ ಎಣ್ಣೆಯನ್ನು ಹಸಿರು ಬಣ್ಣದ ಸೆವೆನ್ ಬಾಟಲಿಯಲ್ಲಿ ತೆಗೆದುಕೊಂಡು ಬಂದರು. ಸದರಿ ಬಾಟಲಿಯನ್ನು ನೋಡಿದರೆ ಗುರುತಿಸುತ್ತೇನೆ.

13. ಸದರಿ ಬಾಟಲಿ ಇದೆ ಎಂದು ಹೇಳಿ ಬಿಳಿಯ ಬಟ್ಟೆಯಲ್ಲಿ ಹೊಲೆದು ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದನ್ನು ಆರೋಪಿತರ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿ ಸದರಿ ಬಾಟಲಿಯಲ್ಲಿದ್ದ ಸೀಮೆ ಎಣ್ಣೆಯನ್ನು ಆರೋಪಿತರು ನನ್ನ ಮೇಲೆ ಸೀಮೆ ಎಣ್ಣೆಯನ್ನು ಸುರಿದಿದ್ದಾಗಿ ನುಡಿದ ಕಾರಣ ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

14. ಘಟನಾ ಸಮಯದಲ್ಲಿ ಕಡು ನೀಲಿ ಬಣ್ಣದ ಚೂಡಿದಾರ್ ಟಾಪ್ ಮತ್ತು ಚೂಡಿದಾರ್ ಪ್ಯಾಂಟನ್ನು ಧರಿಸಿದ್ದೆನು. ಅವುಗಳಿಗೆ ಸೀಮೆ ಎಣ್ಣೆಯಾಗಿತ್ತು. ಅವುಗಳನ್ನು ನಾನು ನನ್ನ ಮಾವನಿಗೆ ಕೊಟ್ಟಿದ್ದೆನು. ಅವರು ಅವುಗಳನ್ನು ಪೊಲೀಸರಿಗೆ ಕೊಟ್ಟಿದ್ದಾರೆ.

ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

15. ಸಾಕ್ಷಿಯು ಒಂದು ನೀಲಿ ಬಣ್ಣದ ಚೂಡಿದಾರ್ ಟಾಪ್ ಮತ್ತು ನೇರಳೆ ಬಣ್ಣದ ಚೂಡಿದಾರ್ ಪ್ಯಾಂಟನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ.2 ಮತ್ತು ಮು.ಮಾ.3 ಎಂದು ಗುರುತಿಸಲಾಯಿತು.

**(ಪಾಟೀ ಸವಾಲು: ಆರೋಪಿತರ ಪರ ವಕೀಲರು ಪ್ರತ್ಯಕ್ಷ ಸಾಕ್ಷಿದಾರರು ಎಂದು ಅಂತಿಮ ವರದಿಯಲ್ಲಿ ನಮೂದಿಸಿರುವ ಚಾಸಾ.4 ರಿಂದ ಚಾಸಾ.6 ರವರ ವಿಚಾರಣೆಯಾಗುವವರೆಗೆ ಪ್ರಸ್ತುತ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿ ಅರ್ಜಿ ಸಲ್ಲಿಸಿದ ಮೇರೆಗೆ ಅದನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲನು ಸದರಿ ಸಾಕ್ಷಿದಾರರ ವಿಚಾರಣೆಯಾಗುವವರೆಗೆ ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.